KAKP310006862021

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ ಯಲಬುರ್ಗಾ.**

- ಉಪಸ್ಥಿತರು -

ಶ್ರೀ ಸಂಜುಕುಮಾರ್ ಪಚ್ಛಾಪುರೆ
ದಿವಾಣಿ ನ್ಯಾಯಾಧೀಶರು
ಮತ್ತು ಪ್ರ ದ ನ್ಯಾ ದಂಡಾಧಿಕಾರಿಗಳು ಯಲಬುರ್ಗಾ.

ದಿನಾಂಕಃ **16** ನೇ ಜುಲೈ **2026**

**ಸಿ ಸಿ ನಂ. 311/2021**

| | | |
|---|---|---|
| ಪಿರ್ಯಾದುದಾರರು | | ರಾಜ್ಯದ ಪರವಾಗಿ<br>ಬೇವೂರು ಠಾಣಾ ಪೊಲೀಸರು.<br><br>(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು) |
| | | ವಿರುದ್ಧ |
| ಆರೋಪಿತನು | 1. | ಶ್ರೀ ಹನಮೇಶ<br>ತಂದೆ ಭೀಮಪ್ಪ ಮಾವದಿ<br>ವ: 30 ವರ್ಷ, ಉ: ಒಕ್ಕಲುತನ,<br>ಸಾ: ವಿರೇಶ ನಗರ, ತಾ: ಮುದ್ದೇಬಿಹಾಳ,<br>ಜಿ: ವಿಜಯಪುರ.<br><br>**(**ಆರೋಪಿತನ ಪರ ಶ್ರೀ ಐ**.**ಆರ್**.**ಕೆಂಚಮ್ಮನವರ ವಕೀರಲು**)** |

| | | |
|---|---|---|
| ಅಪರಾಧಿಕ ಕೃತ್ಯ ನಡೆದ ದಿನಾಂಕ | : | 08-03-2021 |
| ದೂರು ಕೊಟ್ಟ ದಿನಾಂಕ | : | 08-03-2021 |
| ಸಾಕ್ಷಿದಾರರ ವಿಚಾರಣೆ ದಿನಾಂಕ | : | 10-07-2026 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯಗೊಂಡ ದಿನಾಂಕಃ | : | 13-07-2026 |

| | | |
|---|---|---|
| ಆರೋಪಿಸಲ್ಪಟ್ಟ ಅಪರಾಧಗಳು | : | ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ರ ಅಡಿಯಲ್ಲಿ |
| ತೀರ್ಪು ನೀಡಿದ ದಿನಾಂಕ | : | 16-07-2026 |
| ಒಟ್ಟು | : | ವರ್ಷ 05 / ತಿಂಗಳು 04 / ದಿನ 08 |

| ಆರೋಪಿಯ ಪ್ರ.ಸಂ | ಆರೋಪಿಯ ಹೆಸರು | ದಸ್ತಗಿರಿ ಮಾಡಿದ ದಿನಾಂಕ | ಜಾಮೀನಿನ ಮೇಲೆ ಬಿಡುಗಡೆ ಮಾಡಿದ ದಿನಾಂಕ | ದೋಷಾರೋಪಣಾ ಕಲಂಗಳು | ದಂಢಿಸಲಾಯಿತೆ ಅಥವಾ ಬಿಡುಗಡೆಗೊಳಿಸಲಾಯಿತೆ | ದಂಢವಿಧಿಸಿದ ರೀತಿ | ಕಲಂ 428 ರ ಅಡಿಯಲ್ಲಿ ಆರೋಪಿಯನ್ನು ನ್ಯಾಯಾಲಯದ ಬಂಧನದಲ್ಲಿ ವಿಚಾರಣ ಸಮಯದಲ್ಲಿ ಇಧಿಸಿದ ಅವಧಿ |
|---|---|---|---|---|---|---|---|
| 1 | ಶ್ರೀ ಹನಮೇಶ | ಇಲ್ಲ | ಇಲ್ಲ | ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ರ ಅಡಿಯಲ್ಲಿ | ಬಿಡುಗಡೆಗೊಳಿಸಲಾಗಿದೆ | ಇಲ್ಲ | ಇಲ್ಲ |

(ಸಂಜುಕುಮಾರ ಪಚ್ಚಾಪುರೆ)
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ ದ ನ್ಯಾ ದಂ ಗಳು ಯಲಬುರ್ಗಾ.

## -:: ತೀರ್ಪು ::-

ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪೋಲಿಸ್ ಠಾಣಾ ಬೇವೂರು ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ರ ಅಡಿಯಲ್ಲಿ ಆರೋಪಗಳಿಗಾಗಿ ಗುನ್ಹೆ ಸಂಖ್ಯೆ 16/2021 ರಲ್ಲಿ ಸಲ್ಲಿಸಿರುವ ದೋಷಾರೋಪಣೆ ಪಟ್ಟಿಯ ಆಧಾರದ ಮೇಲೆ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿದೆ.

2. <u>ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆ :-</u>

ಪಿರ್ಯಾದಿಯವರು ನೀಡಿದ ದೂರಿನ ಸಾರಾಂಶವೇನೆಂದರೆ, ದಿನಾಂಕ: 08-03-2021 ರಂದು ರಾತ್ರಿ 8.30 ಗಂಟೆಗೆ ಆರೋಪಿತರು ಕುಡಿದು ಸುಖಾ ಸುಮ್ಮನೆ ಜಗಳ ತೆಗೆದು "ನಿನಗೆ ನಮ್ಮ ಮನೆಯಲ್ಲಿ ಸರಿಯಾಗಿ ಕೆಲಸ ಮಾಡಲು ಬರುವುದಿಲ್ಲ, ನೀನು ಚನ್ನಾಗಿಲ್ಲ, ನೀನು ನಮ್ಮ ಮನೆಗೆ ಒಪ್ಪುವುದಿಲ್ಲ, ಬೇರೆ ಗಂಡಸರ ಜೊತೆಗೆ ಏಕೆ ಮಾತನಾಡುತ್ತೀಯಾ ಎಂದು ಸಂಶಯ ಮಾಡುತ್ತಾ, ನೀನು ಇಲ್ಲೇ ನಿನ್ನ ತವರು ಮನೆಯಲ್ಲಿಯೇ ಬಿದ್ದು ಸಾಯಿ ಸೂಳೆ" ಅಂತ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆಬಡೆ ಮಾಡಿರುತ್ತಾರೆ. ಚಾಸಾ-4 ರವರು ಜಗಳ ಮಾಡುವುದನ್ನು ಬಿಡಿಸಲು ಮಧ್ಯ ಹೋದಾಗ ಆರೋಪಿತರು ಲೇ ಸೂಳೇ ಮಕ್ಕಳೇ ನಿಮ್ಮ ಮಗಳನ್ನು ಇಲ್ಲೇ ಇಟ್ಟಗೋರಿ ಲೇ ಬೋಸೂಡಿ ಮಕ್ಕಳೇ ನನ್ನ ಜೊತೆಯಲ್ಲಿ ಕಳಿಸಬೇಡಿ ಅಂತ ಬೈದಾಡುತ್ತಿದ್ದಾಗ ಆಗ ಚಾಸಾ-4 ರವರು ಯಾಕೇ ಬೈದಾಡುತ್ತೀ ಅಂತ ಕೇಳುತ್ತಿದ್ದಾಗ ಆರೋಪಿತನು ಅಲ್ಲಿಯೇ ಬಿದ್ದಿದ್ದ ಒನಕೆಯನ್ನು ತೆಗೆದುಕೊಂಡು ಬಂದವನೇ ಒಮ್ಮಿಂದೊಮ್ಮೆಲೇ ಚಾಸಾ-4 ರವರಿಗೆ ಎಡಗಣ್ಣಿನ ಹತ್ತಿರ ಹೊಡೆದು ರಕ್ತಗಾಯಪಡಿ, ನಂತರ ಅಷ್ಟಕ್ಕೆ ಸುಮ್ಮನೆಯಾಗದೇ ಕೆಳಗೆ ಕೆಡವಿ ಕಾಲಿನಿಂದ ಹೊಟ್ಟೆಗೆ ಒದ್ದು ಒಳಪೆಟ್ಟು ಮಾಡಿದ್ದು ಎನ್ನುವುದಾಗಿರುತ್ತದೆ.

3. ದಿನಾಂಕ 09-03-2021 ರಂದು ಆರೋಪಿತನು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನನ್ನು ಹೊಂದಿರುತ್ತಾರೆ. ನಂತರ ಆರೋಪಿತನು ನ್ಯಾಯಾಲಯದ ಮುಂದೆ ಸರಿಯಾಗಿ ಹಾಜರಾಗದ ಕಾರಣ ನ್ಯಾಯಾಲಯವು ಜಾಮಿನುವಲ್ಲದ ವಾರಂಟ್‌ನ್ನು ಹೊರಡಿಸಿದ್ದು ಮತ್ತು ಅದನ್ನು ಜಾರಿ ಮಾಡಿ ಆರೋಪಿತನನ್ನು ನ್ಯಾಯಾಲಯದ ಮುಂದೆ ದಿನಾಂಕ:06-07-2026 ರಂದು ಹಾಜರುಪಡಿಸಿದ್ದು ಅಲ್ಲಿಂದ ಆರೋಪಿತನು ನ್ಯಾಯಾಂಗ ಬಂಧನದಲ್ಲಿರುತ್ತಾನೆ. ಈ

ನ್ಯಾಯಾಲಯವು ಘಟನೆಯಿಂದ ನಡೆಯಿತೆನ್ನಲಾದ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿತನಿಗೆ ನ್ಯಾಯಾಲಯದ ಹಾಜರಾತಿಗಾಗಿ ಸಮನ್ಸ್‌ನ್ನು ಹೊರಡಿಸಿರುತ್ತದೆ. ಆರೋಪಿತನಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 207 ರ ರೀತಿ ಅಗತ್ಯಪಡಿಸಿರುವಂತೆ ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ರ ರಡಿಯಲ್ಲಿ ಆರೋಪಗಳಿಗೆ ಅವರ ವಿರುದ್ಧದ ಆಪಾದನೆಯನ್ನು ತಯಾರಿಸಿ, ಓದಿ ವಿವರಿಸಲಾಗಿ ಆರೋಪಿತನು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗೆಳೆದಿದ್ದು, ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

4. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಬೆಂಬಲಿಸಿ ದೂರುದಾರ ಸಾಕ್ಷಿ ಚಾಸಾ-1, 4, 5, 7 ಮತ್ತು 6 ರವರನ್ನು ರವರನ್ನು ಅಸಾ-1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿಕೊಂಡು ನಿಪಿ.1 ರಿಂದ 6 ದಾಖಲೆಗಳನ್ನು ಗುರ್ತಿಸಿಕೊಂಡಿರುತ್ತಾರೆ. ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿಯಾದ ಅಸಾ.1 ರಿಂದ 5 ರವರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿಗಳ ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತರ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರದಿದ್ದ ಕಾರಣ ಅವರನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಪ್ರಶ್ನಿಸಿ ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈ ಬಿಡಲಾಗಿದೆ.

5. ಉಭಯಂತ್ರರ ವಾದವನ್ನು ಆಲಿಸಿ ಕಡತವನ್ನು ಪರಿಶೀಲಿ ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಬಂದಿರುತ್ತದೆ.

**-:: ಅಂಶಗಳು ::-**

**1.** ದಿನಾಂಕ: 08-03-2021 ರಂದು ರಾತ್ರಿ 8.30 ಗಂಟೆಗೆ ಆರೋಪಿತರು ಕುಡಿದು ಸುಖಾ ಸುಮ್ಮನೆ ಜಗಳ ತೆಗೆದು "ನಿನಗೆ ನಮ್ಮ ಮನೆಯಲ್ಲಿ ಸರಿಯಾಗಿ ಕೆಲಸ ಮಾಡಲು ಬರುವುದಿಲ್ಲ, ನೀನು ಚನ್ನಾಗಿಲ್ಲ, ನೀನು ನಮ್ಮ ಮನೆಗೆ ಒಪ್ಪುವುದಿಲ್ಲ, ಬೇರೆ ಗಂಡಸರ ಜೊತೆಗೆ ಏಕೆ ಮಾತನಾಡುತ್ತೀಯಾ ಎಂದು ಸಂಶಯ ಮಾಡುತ್ತಾ, ನೀನು ಇಲ್ಲೇ ನಿನ್ನ ತವರು ಮನೆಯಲ್ಲಿಯೇ ಬಿದ್ದು ಸಾಯಿ ಸೂಳೆ" ಅಂತ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆಬಡೆ ಮಾಡಿರುತ್ತಾರೆ. ಚಾಸಾ-4 ರವರು ಜಗಳ ಮಾಡುವುದನ್ನು ಬಿಡಿಸಲು ಮಧ್ಯ ಹೋದಾಗ ಆರೋಪಿತರು ಲೇ ಸೂಳೇ ಮಕ್ಕಳೇ ನಿಮ್ಮ ಮಗಳನ್ನು ಇಲ್ಲೇ ಇಟ್ಟುಗೋರಿ ಲೇ ಬೋಸೂಡಿ ಮಕ್ಕಳೇ ನನ್ನ ಜೊತೆಯಲ್ಲಿ ಕಳಿಸಬೇಡಿ ಅಂತ ಬೈದಾಡುತ್ತಿದ್ದಾಗ ಆಗ ಚಾಸಾ-4 ರವರು ಯಾಕೇ ಬೈದಾಡುತ್ತೀ ಅಂತ ಕೇಳುತ್ತಿದ್ದಾಗ ಆರೋಪಿತನು ಅಲ್ಲಿಯೇ ಬಿದ್ದಿದ್ದ ಒನಕೆಯನ್ನು ತೆಗೆದುಕೊಂಡು ಬಂದವನೇ ಒಮ್ಮಿಂದೊಮ್ಮೆಲೇ ಚಾಸಾ-4 ರವರಿಗೆ ಎಡಗಣ್ಣಿನ ಹತ್ತಿರ ಹೊಡೆದು ರಕ್ತಗಾಯಪಡಿ, ನಂತರ ಅಷ್ಟಕ್ಕೆ ಸುಮ್ಮನೆಯಾಗದೇ ಕೆಳಗೆ ಕೆಡವಿ ಕಾಲಿನಿಂದ ಹೊಟ್ಟೆಗೆ ಒದ್ದು ಒಳಪೆಟ್ಟು ಮಾಡಿದ್ದು, ಆ ಮೂಲಕ ಆರೋಪಿತನಾದ ನೀವು ಭಾರತೀಯ ದಂಡ ಸಂಹಿತೆ ಕಲಂ. 323, 324, 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ ಎನ್ನುವುದನ್ನು ಅಭಿಯೋಜನೆಯ ಸಂಶಯಾತೀತವಾಗಿ ರುಜುವಾತುಪಡಿಸುವರೇ?

**2.** ಹಾಗಿದ್ದರೆ ಯಾವ ಆದೇಶ ?

6. ಮೇಲಿನ ಅಂಶಗಳಿಗೆ ನಾನು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ-1 : ನಕಾರಾತ್ಮಕವಾಗಿ.

ಅಂಶ-2 : ಅಂತಿಮ ಆದೇಶದಂತೆ.

:ಈ ಕೆಳಕಂಡ ಕಾರಣಗಳಿಂದ

**-:: ಕಾರಣಗಳು ::-**

7. ಅಂಶ **1:-** ಅಭಿಯೋಜನೆಯ ಸಂಕ್ಷಿಪ್ತ ಪ್ರಕರಣದ ಸಾರಾಂಶ ಈಗಾಗಲೇ ಪ್ಯಾರಾ ನಂ.2 ರಲ್ಲಿ ಹೇಳಲಾಗಿದೆ. ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಾದ ಚಾಸಾ-1 ರವರು ಪಿರ್ಯಾದಿದಾರರಾಗಿದ್ದು ಪ್ರಥಮ ವರ್ತಮಾನ ಹೇಳಿಕೆ ನೀಡಿದ ಸಾಕ್ಷಿದಾರಾಗಿರುತ್ತಾರೆ. ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತಪಡಿಸುವಲ್ಲಿ ಈ ಕೆಳಕಂಡ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿದ್ದಾರೆ.

8. ಅಸಾ-1 ರವರು ಫಿರ್ಯಾದಿದಾರರಾಗಿದ್ದು ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೆನೆಂದರೆ, ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ತನ್ನ ಅಳಿಯ, ಚಾಸಾ-2 ಮತ್ತು 3 ರವರ ಪರಿಚಯ ಇದೆ. ಚಾಸಾ-4 ತನ್ನ ಗಂಡ, ಚಾಸಾ-5 ತನ್ನ ಮಗಳು, ಚಾಸಾ-6 ತನ್ನ ಮಗ, ಚಾಸಾ-7 ತನ್ನ ಸಂಬಂಧಿಕ, ಚಾಸಾ-8 ತನ್ನ ಮಗ, ಚಾಸಾ-9 ತನ್ನ ಮಾವ. ಸಾಕ್ಷಿಯು ದೂರಿನ ಮೇಲೆ ಇರುವ ತಮ್ಮ ಹೆಬ್ಬೆಟ್ಟಿನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯು ಒಂದು ಪೋಟೊದಲ್ಲಿ ತಾವು ಇರುವುದಾಗಿ ನೋಡಿ ಗುರುತಿಸಿದ್ದು ನಿಪಿ-2 ಎಂದು ಗುರುತಿಸಿದ್ದು ನಿಪಿ-1 ರಲ್ಲಿ ಬರೆದ ವಿಷಯ ತನಗೆ ಗೊತ್ತಿಲ್ಲ ತಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

9. ಅಸಾ-2 ಮತ್ತು 3 ರವರು ಪ್ರತ್ಯೇಕ್ಷ ಸಾಕ್ಷಿದಾರ ಮತ್ತು ಗಾಯಾಳುಯಾಗಿದ್ದು, ಅಸಾ-4 ಮತ್ತು 5 ರವರು ಪ್ರತ್ಯೇಕ್ಷ ಸಾಕ್ಷಿದಾರರಾಗಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೆನೆಂದರೆ, ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಪರಿಚಯ ಇದೆ, ಚಾಸಾ-1 ರಿಂದ 9 ರವರ ಪರಿಚಯ ಇದೆ. ಚಾಸಾ-1 ಮತ್ತು 4 ಹಾಗೂ ಆರೋಪಿತನ ಮದ್ಯ ಆದ ಗಲಾಟೆಯನ್ನು ತಾವು ನೋಡಿಲ್ಲ

ಮತ್ತು ಬಿಡಿಸಿಲ್ಲ, ಈ ಬಗ್ಗೆ ತಾವು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಈ ಮೇಲೆ ಹೇಳಿದ ಮೌಖಿಕ ಸಾಕ್ಷಿಗೆ ಬೆಂಬಲವಾಗಿ ಅಭಿಯೋಜನೆಯು ಕೆಳಕಂಡ ದಾಖಲೆಗಳನ್ನು ಗುರ್ತಿಸಿಕೊಂಡಿರುತ್ತಾರೆ. ನಿಪಿ.1 ದೂರು, ನಿಪಿ-2 ಪೋಟೊ, ನಿಪಿ-3 ರಿಂದ 6 ಹೇಳಿಕೆಗಳು.

10. ಈ ಮೇಲ್ಕಂಡ ಮೌಖಿಕ ಮತ್ತು ದಾಖಲಾತಿ ಸಾಕ್ಷಿಗಳನ್ನು ಕುಲಂಕುಶವಾಗಿ ಪರಿಶೀಲಿಸಿ ನೋಡಲಾಗಿ ಅಸಾ-1 ರವರು ಈ ಪ್ರಕರಣದ ನಿಪಿ-1 ದೂರುದಾರರಾಗಿದ್ದು ಹಾಗೂ ಪಂಚನಾಮೆಯ ಪಂಚ ಸಾಕ್ಷಿದಾರರಾಗಿದ್ದು, ಅಸಾ-2 ರಿಂದ 5 ರವರು ಗಾಯಾಗಳು ಮತ್ತು ಪ್ರತ್ಯೇಕ್ಷ ಸಾಕ್ಷಿದಾರರಾಗಿರುತ್ತಾರೆ. ಆದರೆ ಸಾಕ್ಷಿದಾರರು ಅಭಿಯೋಜನೆಗೆ ಬೆಂಬಲಿಸಿರುವುದಿಲ್ಲ ಮತ್ತು ಗಲಾಟೆಯ ಬಗ್ಗೆ ತಮಗೆ ಗೊತ್ತಿಲ್ಲ, ತಾವುಗಳು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷದ ಅವಲೋಕನ ಮಾಡಿ ನೋಡಿದಾಗ ಅಭಿಯೋಜನೆ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಅಸಾ-1 ರಿಂದ 5 ರವರು ಅಭಿಯೋಜನೆಯನ್ನು ಬೆಂಬಲಿಸದೆ ಭಾಗಶಃ ಪ್ರತಿಕೂಲ ಹೊಂದಿದ್ದು, ಅಭಿಯೋಜನೆಗೆ ಆಘಾತಕಾರಿಯಾಗಿರುತ್ತದೆ. ಅಸಾ-1 ರಿಂದ 5 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟಿಸವಾಲಿಗೆ ಒಳಪಡಿಸಿದ್ದು, ಆದರೆ ತಮ್ಮ ಪಾಟಿಸವಾಲಿನಲ್ಲಿ ಅಭಿಯೋಜನೆಗೆ ಬೆಂಬಲವಾಗುವ ಯಾವುದೇ ಒಪ್ಪಿಗೆ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ.

11. ಆದ್ದರಿಂದ ಅಭಿಯೋಜನೆಯು ದಿನಾಂಕ:08-03-2021 ರಂದು ರಾತ್ರಿ 8.30 ಗಂಟೆಗೆ ಆರೋಪಿತರು ಕುಡಿದು ಸುಖಾ ಸುಮ್ಮನೆ ಜಗಳ ತೆಗೆದು "ನಿನಗೆ ನಮ್ಮ ಮನೆಯಲ್ಲಿ ಸರಿಯಾಗಿ ಕೆಲಸ ಮಾಡಲು ಬರುವುದಿಲ್ಲ, ನೀನು ಚನ್ನಾಗಿಲ್ಲ, ನೀನು ನಮ್ಮ ಮನೆಗೆ ಒಪ್ಪುವುದಿಲ್ಲ, ಬೇರೆ ಗಂಡಸರ ಜೊತೆಗೆ ಏಕೆ ಮಾತನಾಡುತ್ತೀಯಾ ಎಂದು ಸಂಶಯ

ಮಾಡುತ್ತಾ, ನೀನು ಇಲ್ಲೇ ನಿನ್ನ ತವರು ಮನೆಯಲ್ಲಿಯೇ ಬಿದ್ದು ಸಾಯಿ ಸೂಳೆ" ಅಂತ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆಬಡೆ ಮಾಡಿರುತ್ತಾರೆ. ಚಾಸಾ-4 ರವರು ಜಗಳ ಮಾಡುವುದನ್ನು ಬಿಡಿಸಲು ಮಧ್ಯ ಹೋದಾಗ ಆರೋಪಿತರು ಲೇ ಸೂಳೇ ಮಕ್ಕಳೇ ನಿಮ್ಮ ಮಗಳನ್ನು ಇಲ್ಲೇ ಇಟ್ಟುಗೋರಿ ಲೇ ಬೋಸೂಡಿ ಮಕ್ಕಳೇ ನನ್ನ ಜೊತೆಯಲ್ಲಿ ಕಳಿಸಬೇಡಿ ಅಂತ ಬೈದಾಡುತ್ತಿದ್ದಾಗ ಆಗ ಚಾಸಾ-4 ರವರು ಯಾಕೇ ಬೈದಾಡುತ್ತೀ ಅಂತ ಕೇಳುತ್ತಿದ್ದಾಗ ಆರೋಪಿತನು ಅಲ್ಲಿಯೇ ಬಿದ್ದಿದ್ದ ಒನಕೆಯನ್ನು ತೆಗೆದುಕೊಂಡು ಬಂದವನೇ ಒಮ್ಮಿಂದೊಮ್ಮೆಲೇ ಚಾಸಾ-4 ರವರಿಗೆ ಎಡಗಣ್ಣಿನ ಹತ್ತಿರ ಹೊಡೆದು ರಕ್ತಗಾಯಪಡಿ, ನಂತರ ಅಷ್ಟಕ್ಕೆ ಸುಮ್ಮನೆಯಾಗದೇ ಕೆಳಗೆ ಕೆಡವಿ ಕಾಲಿನಿಂದ ಹೊಟ್ಟೆಗೆ ಒದ್ದು ಒಳಪೆಟ್ಟು ಮಾಡಿದ್ದು ಎನ್ನುವುದನ್ನು ಸಾಬೀತುಪಡಿಸುವಲ್ಲಿ ಅಭಿಯೋಜನೆಯವರು ವಿಫಲವಾಗಿರುತ್ತಾರೆ. ಆದ್ದರಿಂದ ಸಂಶಯದ ಲಾಭ ಪಡೆದು ಆರೋಪಿತನು ಬಿಡುಗಡೆಗೆ ಅರ್ಹನಾಗಿರುತ್ತಾರೆ. ಆದ್ದರಿಂದ ಆರೋಪಿತನ ವಿರುದ್ಧ ಹೊರಡಿಸಲಾದ ಆರೋಪಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ ಎಂದು ನಿರ್ಣಯಿಸಿ, ನ್ಯಾಯಾಲಯ ನಿರ್ಣಯಕ್ಕೆ ಬಂದ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.

12. <u>ಅಂಶ**-2:-**</u> ಮೇಲ್ಕಂಡ ಚರ್ಚೆಯಲ್ಲಿ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ ಆರೋಪಿತನು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು, ಈ ಕೆಳಕಂಡ ಆದೇಶ ಹೊರಡಿಸಿದೆ.

## <u>-:: ಆದೇಶ ::-</u>

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದ ಆರೋಪಿತರ ವಿರುದ್ದ ಹೊರಿಸಲಾದ ಭಾರತ ದಂಡ ಸಂಹಿತೆ ಕಲಂ 323, 324,

504 ರಡಿಯಲ್ಲಿನ ಆರೋಪಗಳಿಂದ ಆರೋಪಿತನನ್ನು ನಿರ್ದೋಷಿಗಳೆಂದು ತಿರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿತರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ರದ್ದುಗೊಳಿಸಿದೆ ಹಾಗೂ ಅವರ ಜಾಮೀನುದಾರನನ್ನು ಸ್ವತಂತ್ರಗೊಳಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ 16 ನೇ ಜುಲೈ 2026 ರಂದು ಆದೇಶವನ್ನು ಘೋಷಿಸಲಾಯಿತು.)

(ಸಂಜುಕುಮಾರ ಪಚ್ಚಾಪುರೆ)
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಯಲಬುರ್ಗಾ.

## -ಅನುಬಂಧ-

**1.** ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ

| ಕ್ರ.ಸಂ. | ಹೆಸರು | ಸಾಕ್ಷ್ಯದ ಸ್ವರೂಪ |
|---|---|---|
| 1 | ಶ್ರೀಮತಿ ಹನುಮವ್ವ | ಫಿರ್ಯಾದಿದಾರಳು |
| 2 | ಶ್ರೀ ಕುಂಟೆಪ್ಪ | ಪ್ರತ್ಯೇಕ್ಷ ಸಾಕ್ಷಿ ಮತ್ತು ಗಾಯಾಳು |
| 3 | ಶ್ರೀ ಮಾಯಮ್ಮ | ಪ್ರತ್ಯೇಕ್ಷ ಸಾಕ್ಷಿ ಮತ್ತು ಗಾಯಾಳು |
| 4 | ಶ್ರೀ ಕುಂಟೆಪ್ಪ | ಪ್ರತ್ಯೇಕ್ಷ ಸಾಕ್ಷಿ |
| 5 | ಶ್ರೀ ಮಾರುತಿ | ಪ್ರತ್ಯೇಕ್ಷ ಸಾಕ್ಷಿ |

**2.** ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳುಃ

| ಕ್ರ.ಸಂ. | ನಿಶಾನೆಗಳ ಸಂಖ್ಯೆ | ವಿವರಣೆ |
|---|---|---|
| 1 | ನಿಪಿ-1 | ದೂರು |
| 2 | ನಿಪಿ-2 | ಪೋಟೊ |
| 3 | ನಿಪಿ-3 ರಿಂದ 6 | ಹೇಳಿಕೆಗಳು |

**3.** ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳುಃ

- ಇಲ್ಲಾ -

**4.** ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.

- ಇಲ್ಲಾ -

**5.** ಆರೋಪಿತರ ಪರ ಗುರುತಿಸಲಾದ ದಾಖಲೆಗಳುಃ

- ಇಲ್ಲಾ -

(ಸಂಜುಕುಮಾರ ಪಚ್ಚಾಪುರೆ)
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಯಲಬುರ್ಗಾ.

(ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಘೋಷಿಸಲಾಯಿತು ಪ್ರತ್ಯೇಕ ತೀರ್ಪಿನಲ್ಲಿ)

**-:: ಆದೇಶ ::-**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.255(1) ರಡಿಯಲ್ಲಿಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದ ಆರೋಪಿತರ ವಿರುದ್ಧ ಹೊರಿಸಲಾದ ಭಾರತ ದಂಡ ಸಂಹಿತೆ ಕಲಂ 323, 324, 504 ರಡಿಯಲ್ಲಿನ ಆರೋಪಗಳಿಂದ ಆರೋಪಿತರನ್ನು ನಿರ್ದೋಷಿಗಳೆಂದು ತಿರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿತರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ರದ್ದುಗೊಳಿಸಿದೆ ಹಾಗೂ ಅವರ ಜಾಮೀನುದಾರನನ್ನು ಸ್ವತಂತ್ರಗೊಳಿಸಲಾಗಿದೆ.

(ಸಂಜುಕುಮಾರ ಪಚ್ಚಾಪುರೆ)
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಯಲಬುರ್ಗಾ.